ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ. ಮಡಿಕೇರಿ-571201
Telephone No : 08272-225650/224701
E-mail ID : cesceemdk@gmail.com eeemdk@cescmysore.org

CHAMUNDESHWARI ELECTRICITY
SUPPLY CORPORATION LIMITED
O & M Division, CESC, Madikeri-571201
Web site: www.cescmysore.org

Company Identity Number :- (CIN): U40109KA2004SGC035177

ಕ್ರಮಾಂಕ : ಕಾನಿಇಂ(ವಿ)/ಸಕಾನಿಇಂ(ಕ)/ಸಇಂ(ತಾಂ)/2021-22/2836 ದಿನಾಂಕ: 24/9/2021

## ಸಭೆಯ ನಡಾವಳಿಗಳು

**ದಿನಾಂಕ: 20.09.2021 ರಂದು ವಿರಾಜಪೇಟೆ ಉಪವಿಭಾಗ ಕಛೇರಿಯಲ್ಲಿ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ನಡಾವಳಿಗಳು.**

ಸಭೆಯಲ್ಲಿ ಹಾಜರಿದ್ದವರು:-

1. ಶ್ರೀ.ಎಂ.ಪಿ.ಅಶೋಕ್ : ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ಮಡಿಕೇರಿ ವಿಭಾಗ.
2. ಶ್ರೀ.ದೇವಯ್ಯ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ತಾಂ), ಮಡಿಕೇರಿ ವಿಭಾಗ.
3. ಶ್ರೀ.ಪಿ.ಎಸ್.ಸುರೇಶ್ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿರಾಜಪೇಟೆ
4. ಶ್ರೀ.ಕೆ.ಎಂ.ದಿಲೀಪ್ : ಸಹಾಯಕ ಇಂಜಿನಿಯರ್(ತಾಂ), ವಿರಾಜಪೇಟೆ
4. ಶ್ರೀ.ಹೆಚ್.ಎಸ್.ರಮೇಶ್ : ಪ್ರಭಾರ ಸಹಾಯಕ ಇಂಜಿನಿಯರ್(ವಿ), ಸೆಸ್ಕ್, ವಿರಾಜಪೇಟೆ.
5. ಶ್ರೀಮತಿ.ಬಿ.ಜಿ.ಚಂಪಾವತಿ : ಕಿರಿಯ ಇಂಜಿನಿಯರ್(ತಾಂ), ಸೆಸ್ಕ್, ಸಿದ್ದಾಪುರ.
6. ಶ್ರೀ.ಕೆ.ಎಸ್.ಸ್ವರಾಗ್ : ಪ್ರಭಾರ ಕಿರಿಯ ಸಹಾಯಕರು, ಸೆಸ್ಕ್, ಅಮ್ಮತ್ತಿ.
7. ಶ್ರೀ.ಸಿ.ಬಿ.ದೇವಯ್ಯ : ಪ್ರಭಾರ ಕಿರಿಯ ಸಹಾಯಕರು, ಸೆಸ್ಕ್, ಪಾಲಿಬೆಟ್ಟ.
8. ಶ್ರೀ.ಜಗದೀಶ್ : ಪ್ರಭಾರ ಹಿರಿಯ ಸಹಾಯಕರು, ಕಂದಾಯ ಶಾಖೆ, ಸೆಸ್ಕ್, ವಿರಾಜಪೇಟೆ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನೂ ಸ್ವಾಗತಿಸಿ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ) ರವರಾದ ಶ್ರೀ.ಎಂ.ಪಿ.ಅಶೋಕ್ ರವರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವಂತೆ ವಿನಂತಿಸಿಕೊಂಡರು. ದಿನಾಂಕ:05.03.2021 ರಂದು ನಡೆದ ಸಭೆಯ ನಡಾವಳಿಗಳ ಬಗ್ಗೆ ಹಾಗು ಸಾಧಿಸಿದ ಪ್ರಗತಿ ಬಗ್ಗೆ ಚರ್ಚಿಸಿ ಸಭೆಯಲ್ಲಿ ಹಾಜರಿದ್ದ ಗ್ರಾಹಕರ ಕುಂದುಕೊರತೆಗಳನ್ನು ಆಲಿಸಿ ಈ ಕೆಳಕಂಡಂತೆ ಸಲಹೆ ಸೂಚನೆಗಳನ್ನು ನೀಡಿದರು.

| ಕ್ರಮ ಸಂಖ್ಯೆ | ಸಲಹೆ/ದೂರು ಗಳನ್ನು ನೀಡಿದ ಸದಸ್ಯರ ಹೆಸರು ಮತ್ತು ವಿಳಾಸ | ಸಲಹೆ/ದೂರುಗಳ ವಿವರ | ಅನುಸರಣೆ |
|---|---|---|---|
| 1 | ಶ್ರೀ.ನಂಜಪ್ಪ<br>ಬೇಟೋಳಿ ಗ್ರಾಮ<br>ದೂ: 9449790189 | • ಬೇಟೋಳಿ ಗ್ರಾಮ ವ್ಯಾಪ್ತಿಯಲ್ಲಿ ವಿದ್ಯುತ್ ಅಡಚಣೆ ಅಧಿಕವಾಗಿದ್ದು ಮಿತಗೊಳಿಸುವಂತೆ ಕೇಳಿಕೊಂಡರು.<br><br>• ಪಾಲಂಗಾಲ ಫೀಡರ್‌ಗೆ ಹೊಸ ಜಿ.ಓ.ಎಸ್ ಅಳವಡಿಸುವಂತೆ ಕೇಳಿಕೊಂಡರು.<br><br>• ತಮ್ಮ ಗ್ರಾಮ ವ್ಯಾಪ್ತಿಯ ಮಳೆಗಾಲದಲ್ಲಿ ಪ್ರವಾಹ ಉಂಟಾಗುತ್ತಿರುವುದಿಂದ ಈಗಿರುವ ವಿದ್ಯುತ್ ಮಾರ್ಗವನ್ನು ಬದಲಿಸುವಂತೆ ಮಾಡುವಂತೆ ಕೇಳಿಕೊಂಡರು.<br><br>• ತಮ್ಮ ಸ್ನೇಹಿತರಾದ ಶ್ರೀ ರವರ | * ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ವಿದ್ಯುತ್ ಅಡಚಣೆ ಕಡಿಮೆಗೊಳಿಸಲು ಅಗತ್ಯ ಕಾಮಗಾರಿಗಳಾದ ಜಂಗಲ್ ಕಟ್ಟಿಂಗ್, ಪರಿವರ್ತಕಗಳ ನಿರ್ವಹಣೆ, ಮಾರ್ಗ ವಿಮುಕ್ತಿಗಳನ್ನು ಕಡಿಮೆ ಮಾಡುವಂತೆ ಶಾಖಾಧಿಕಾರಿಗಳಿಗೆ ಸೂಚನೆ ನೀಡಿದರು.<br><br>* ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ವಿಭಾಗೀಯ ಉಗ್ರಾಣದಲ್ಲಿರುವ ಜಿ.ಓ.ಎಸ್ ಪಡೆದುಕೊಂಡು ಕಾಮಗಾರಿ ಮುಗಿಸುವಂತೆ ಶಾಖಾಧಿಕಾರಿಗಳಿಗೆ ಸೂಚಿಸಿದರು.<br><br>* ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಶಾಖೆಯಲ್ಲಿರುವ ಅಗತ್ಯ ಸಾಮಾಗ್ರಿಗಳನ್ನು ಉಪಯೋಗಿಸಿಕೊಂಡು ಕಾಮಗಾರಿ ಮುಗಿಸುವಂತೆ ಇಲ್ಲದಿದ್ದಲ್ಲಿ ಕೂಡಲೇ ಸ್ಥಳ ಪರಿಶೀಲನೆ ಮಾಡಿ ಆರ್.ಡಿ.ಎಸ್.ಎಸ್ ಯೋಜನೆಯಡಿಯಲ್ಲಿ ಪ್ರಸ್ತಾವನೆ ಸಲ್ಲಿಸುವಂತೆ ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಸೂಚನೆ ನೀಡಿದರು.<br><br>* ಉತ್ತರಿಸಿದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಆದ ಶ್ರೀ.ಸುರೇಶ್ ರವರು ವಿದ್ಯುತ್ ಮಾರ್ಗವು 18 ಫೀಟ್ ಎತ್ತರದಲ್ಲಿದ್ದು, ಗ್ರಾಹಕರು 20 |

| | | | |
|---|---|---|---|
| | | ತೋಟದಲ್ಲಿರುವ 11 ಕೆ.ವಿ ತಂತಿಯು ತೀರಾ ಕೆಳಮಟ್ಟದಲ್ಲಿರುವುದರಿಂದ ಮೆಣಸು ಕುಯ್ಯಲು ಏಣಿ ತೆಗೆದುಕೊಂಡ ಹೋಗಲು ತೊಂದರೆಯಾಗಿರುವುದರಿಂದ ಹೊಸ ಮಧ್ಯಂತರ ಕಂಬವನ್ನು ಅಳವಡಿಸಿ ತಂತಿಯನ್ನು ಮೇಲೇರಿಸುವಂತೆ ಕೋರಿದರು.<br>• ತಮ್ಮ ಮನೆಗೆ ಬರುವ ಮಾಪಕ ಓದುಗ ಸರಿಯಾದ ಪ್ರತೀ ತಿಂಗಳು ನಿಗದಿತ ದಿನಾಂಕದಂದು ಬಿಲ್ಲು ವಿತರಿಸುತಿಲ್ಲ ಆದುದರಿಂದ ಏಜೆನ್ಸಿ ಮಾಪಕ ಓದುಗರನ್ನು ತೆಗೆದು ನಿಗಮದ ಮಾಪಕ ಓದುಗರನ್ನು ಕಳುಹಿಸಿಕೊಡುವಂತೆ ಕೇಳಿದರು. | ಫೀಟ್ ಏಣಿಯನ್ನು ಉಪಯೋಗ ಮಾಡುವುದರಿಂದ ವಿದ್ಯುತ್ ಅಪಘಾತವಾಗು ಸಂಭವವಿರುವುದರಿಂದ ಫೈಬರ್ ಏಣಿಯನ್ನು ಉಪಯೋಗಿಸುವಂತೆ ತಿಳಿಸಿದರು ಮತ್ತು ಕೆಳಮಟ್ಟದಲ್ಲಿರುವ ವಿದ್ಯುತ್ ವಾಹಕವನ್ನು ಮಧ್ಯಂತರ ಕಂಬಗಳನ್ನು ಅಳವಡಿಸಿ ಎತ್ತರಿಸುವಂತೆ ಶಾಖಾಧಿಕಾರಿಗಳಿಗೆ ಸೂಚಿಸಿದು. ಮುಂದುವರಿದು ಕಾರ್ಯನಿರ್ವಾಹಕ ಇಂಜನಿಯರ್ ರವರು ಮಾತನಾಡುತ್ತ ಆನೆ ಕಾರಿಡಾರ್ ಮಧ್ಯಂತರ ಕಂಬಗಳ ಅಂದಾಜುಪಟ್ಟಿ ಸಲ್ಲಿಸುವ ಸಂಧರ್ಭ ರೇಖಾಂಶ (Logtitude) ಮತ್ತು ಅಕ್ಷಾಂಶ (Latitude) ಕಡ್ಡಾಯವಾಗಿ ನಮೂದಿಸುವಂತೆ ಎಲ್ಲಾ ಶಾಖಾಧಿಕಾರಿಗಳಿಗೆ.<br>* ಇದಕ್ಕೆ ಉತ್ತರಿಸಿದ ಕಾರ್ಯನಿರ್ವಾಹಕ ಇಂಜನಿಯರ್(ವಿ) ರವರು ಮಾತನಾಡುತ್ತ ಪ್ರಸಕ್ತ ತಿಂಗಳಿನಲ್ಲಿ ಸಾಫ್ಟ್‌ವೇರ್ ಅಡಚಣೆಯಾಗಿರುವುದರಿಂದ ಸೆಪ್ಟಂಬರ್-21 ತಿಂಗಳಿನಲ್ಲಿ ಬಿಲ್ ವಿತರಿಸಲು ವಿಳಂಭವಾಗಿದ್ದು ಮುಂದಿನ ತಿಂಗಳಿನಲ್ಲಿ ಸರಿಯಾಗುವುದಾಗಿ ತಿಳಿಸಿದರು. |
| 3 | ಶ್ರೀ.ಅಯ್ಯಣ್ಣ<br>ಚೆನ್ನಯ್ಯನಕೋಟೆ<br>ದೂ.9448448369 | • ಚೆನ್ನಯ್ಯನಕೋಟೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ತಮ್ಮ ಸ್ಥಾವರಕ್ಕೆ ಅಳವಡಿಸಿರುವ ಆರ್.ಆರ್.ಸಂಖ್ಯೆ:ಸಿ.ಕೆ.ಐ.ಪಿ-2123 ನ್ನು ಗದ್ದೆಗೆ ಉಪಯೋಗಿಸುತ್ತಿದ್ದು ಬಿಲ್ಲು ಮಾತ್ರ ಕಾಫಿ ಕೃಷಿಗೆ ಬರುತ್ತಿದ್ದು, ಸದರಿ ಬಿಲ್ಲನ್ನು ಬದ್ಲಲಿಸಿಕೊಡುವಂತೆ ಕೇಳಿದರು. | * ಉತ್ತರಿಸಿದ ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ) ರವರಾದ ಶ್ರೀ.ಸುರೇಶ್ ರವರು ತಾವುಗಳೇ ಖುದ್ದಾಗಿ ಬಂದು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಗ್ರಾಹಕರಿಗೆ ತಿಳಿಸಿದರು. ಪರಿಶೀಲಿಸಿ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದರು. |

ಕಾರ್ಯನಿರ್ವಾಹಕ ಇಂಜನಿಯರ್(ವಿ)
ಕಾ ಮತ್ತು ಪಾ ವಿಭಾಗ ಕಛೇರಿ.
ಚಾ.ವಿ.ಸ.ನಿ.ನಿ., ಮಡಿಕೇರಿ.

ಪ್ರತಿಯನ್ನು:-
1. ಅಧೀಕ್ಷಕ ಇಂಜನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾಮರಾಜನಗರ-ಕೊಡಗು, ಚಾವಿಸನಿನಿ, ಶ್ರೀಹರ್ಷ ರಸ್ತೆ ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
2. ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ), ಕಾ ಮತ್ತು ಪ ಉಪ-ವಿಭಾಗ, ವಿರಾಜಪೇಟೆ ರವರ ಮಾಹಿತಿಗಾಗಿ